# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಮುಸ್ತಾಕ ಅಹ್ಮದ ಶಫೀಕ್, ಕಿರಿಯ ಇಂಜಿನಿಯರ್ (ಹಿಂದಿನ ಡಿ.ಆರ್.ಡಿ.ಎಸ್. ನಿಂದ ನೇಮಕಗೊಂಡು ಸಕ್ರಮಗೊಂಡ ನೌಕರ) ಇವರನ್ನು ಸಹಾಯಕ ಇಂಜಿನಿಯರ್ ಹುದ್ದೆಯ ವೃಂದಕ್ಕೆ ವರ್ಗಾಯಿಸುವ ಬಗ್ಗೆ-ಆದೇಶ.

ಓದಲಾಗಿದೆ:-

1. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ. ಮುಇಂ / ಪಂರಾಇಂಇ /ಬೆಂ /ಸಿ-13 /2010-11/10501, ದಿನಾಂಕ: 22-02-2011
2. ಸರ್ಕಾರದ ಪತ್ರ ಸಂಖ್ಯೆ. ಆರ್‌ಡಿಪಿ 83 ಪಿಬಿವಿ 88 ದಿನಾಂಕ. 5-12-88 ಮತ್ತು 20-5-89.
3. ಮುಖ್ಯ ಕಾರ್ಯದರ್ಶಿಗಳು, ಜಿಲ್ಲಾ ಪರಿಷತ್, ಗುಲಬರ್ಗಾ ಇವರ ಆದೇಶ ಸಂಖ್ಯೆ. ಜಿಪಗು/ ಸಿಬ್ಬಂದಿ/ 515/ 88-89, ದಿನಾಂಕ 21-09-1989
4. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 139 ಸೇಶಿಕಾ 1991, ದಿನಾಂಕ. 18-11-98.
5. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 139 ಸೇಶಿಕಾ 1991, ದಿನಾಂಕ. 21-01-99.
6. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 227 ಜಿಪಅ 2003 ದಿನಾಂಕ. 01-12-2004
7. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 165 ಸೇಶಿಕಾ 2004 ದಿನಾಂಕ. 24-11-2005
8. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 17 ಸೇಶಿಕಾ 2006 ದಿನಾಂಕ. 07-07-2006
9. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 224 ಸೇಶಿಕಾ 2006 ದಿನಾಂಕ. 07-10-2006
10. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೆಳಗಾವಿ ಇವರ ಆದೇಶ ಸಂಖ್ಯೆ. ತಾಪಸ/ಸಿಬ್ಬಂದಿ/ ವಿವ-53/2003-04, ದಿನಾಂಕ. 23-08-2007.
11. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 110 ಸೇಶಿಕಾ 2010 ದಿನಾಂಕ. 13-07-2011

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ. 25-04-2011 ಪತ್ರದಲ್ಲಿ ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರು ಮುಸ್ತಾಕ್ ಅಹ್ಮದ್ ಶಫೀಕ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರು ಜೆ.ಆರ್.ಎನ್.ರಾಜಸ್ಥಾನ ವಿದ್ಯಾಪೀಠ ವಿಶ್ವವಿದ್ಯಾಲಯದಲ್ಲಿ ಬಿ.ಟೆಕ್ (ಸಿವಿಲ್) ಪದವಿಯನ್ನು ಪಡೆದಿದ್ದು ಇವರನ್ನು ಕಿರಿಯ ಇಂಜಿನಿಯರ್ ಹುದ್ದೆಯ ವೃಂದದಿಂದ ಸಹಾಯಕ ಇಂಜಿನಿಯರ್ ಹುದ್ದೆಯ ವೃಂದಕ್ಕೆ ಬದಲಾವಣೆ ಮಾಡಲು ಕೋರಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಹಿಂದಿನ ಡಿ.ಆರ್.ಡಿ.ಎಸ್. ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಗಳಲ್ಲಿ ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿದ್ದ ಕೆಲವು ಪದವೀಧರ ಕಿರಿಯ ಇಂಜಿನಿಯರ್ ಗಳನ್ನು ಆಯಾ ಜಿಲ್ಲಾ ಪಂಚಾಯತ್ ಗಳಲ್ಲಿ ಸಕ್ರಮಗೊಳಿಸಲು ಸರ್ಕಾರವು ನಿರ್ದೇಶನ ನೀಡಿತ್ತು.

ಮೇಲೆ ಕ್ರಮ ಸಂಖ್ಯೆ (3)-ರಲ್ಲಿ ಓದಲಾದ ದಿನಾಂಕ. 21-09-1989ರ ಆದೇಶದಲ್ಲಿ ಮುಖ್ಯ ಕಾರ್ಯದರ್ಶಿಗಳು, ಜಿಲ್ಲಾ ಪರಿಷತ್, ಗುಲಬರ್ಗಾ ಇವರು ಕ್ಷೇತ್ರಾಭಿವೃದ್ಧಿ ಅಧಿಕಾರಿ ಕಚೇರಿ, ಆಳಂದ ಇಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಮುಸ್ತಾಕ ಅಹ್ಮದ್ ಶಫೀಕ, ಕಿರಿಯ ಇಂಜಿನಿಯರ್ ಇವರ ಸೇವೆಯನ್ನು ಜಿಲ್ಲಾ ಪಂಚಾಯತ್ ಸೇವೆಯಲ್ಲಿ ವಿಲೀನಗೊಳಿಸಿ, ಅವರ ಸೇವೆಯನ್ನು ಕ್ರಮಬದ್ಧಗೊಳಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ (4) ರಲ್ಲಿ ಓದಲಾದ ದಿನಾಂಕ. 18-11-1998 ರ ಆದೇಶದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ಸಹಾಯಕ ಇಂಜಿನಿಯರ್ ಹುದ್ದೆಗಳನ್ನು ನೇರ ನೇಮಕಾತಿ ಅಥವಾ ಕಿರಿಯ ಇಂಜಿನಿಯರ್ ಹುದ್ದೆಗಳಿಂದ ವರ್ಗಾವಣೆ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ (5) ರಿಂದ (11)ರಲ್ಲಿ ಓದಲಾದ ವಿವಿಧ ದಿನಾಂಕಗಳ ಆದೇಶಗಳಲ್ಲಿ ಅಂದಿನ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಳಿಯಿಂದ ನೇಮಕಗೊಂಡು ನಂತರ ಸರ್ಕಾರದ ದಿನಾಂಕ. 5-12-1988 ಹಾಗೂ 20-5-1989 ರ ನಿರ್ದೇಶನಗಳನ್ವಯ ಸೇವಾ ಸಕ್ರಮಗೊಂಡ ಹಾಗೂ ಬಿ.ಇ. ಪದವಿ ಪಡೆದಿದ್ದ ಒಟ್ಟು 39 ಕಿರಿಯ ಇಂಜಿನಿಯರ್‌ಗಳನ್ನು ಸಹಾಯಕ ಇಂಜಿನಿಯರ್ ಹುದ್ದೆಗಳಿಗೆ ವರ್ಗಾಯಿಸಲಾಗಿದೆ. ಅದರಂತೆ ಈಗಾಗಲೇ ಬಿ.ಟೆಕ್ (ಸಿವಿಲ್) ವ್ಯಾಸಂಗ ಮುಗಿಸಿರುವ ಹಿಂದಿನ ಡಿ.ಆರ್.ಡಿ.ಎಸ್. ನೌಕರರಾದ ಶ್ರೀ ಮುಸ್ತಾಕ ಅಹ್ಮದ ಶಫೀಕ ಇವರು ಕಿರಿಯ ಇಂಜಿನಿಯರ್ ವೃಂದದಿಂದ ಸಹಾಯಕ ಇಂಜಿನಿಯರ್ ವೃಂದಕ್ಕೆ ವರ್ಗಾವಣೆ ಹೊಂದಲು ಅರ್ಹರಿರುವುದರಿಂದ, ಈ ಪ್ರಕರಣವನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ: ಗ್ರಾಅಪ 75 ಸೇಶಿಕಾ 2011 ಬೆಂಗಳೂರು,**
**ದಿನಾಂಕ. 03-12-2012.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಮುಸ್ತಾಕ ಅಹ್ಮದ ಶಫೀಕ, ಕಿರಿಯ ಇಂಜಿನಿಯರ್ ಇವರು ಬಿ.ಟೆಕ್ (ಸಿವಿಲ್ ಇಂಜಿನಿಯರಿಂಗ್) ಪದವಿ ಪಡೆದಿರುವುದರಿಂದ ಸರ್ಕಾರಿ ಆದೇಶ ಸಂಖ್ಯೆ. ಗ್ರಾಅಪ. 139 ಸೇಶಿಕಾ 91 ದಿ. 18-11-1998 ರ ಪ್ರಕಾರ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕಿರಿಯ ಇಂಜಿನಿಯರ್ ಹುದ್ದೆಯ (ವೇತನ ಶ್ರೇಣಿ ರೂ. 8825-1600, 2012ರ ಪರಿಷ್ಕೃತ ವೇತನ ಶ್ರೇಣಿ ರೂ. 17650-32000) ವೃಂದದಿಂದ ಸಹಾಯಕ ಇಂಜಿನಿಯರ್ ಹುದ್ದೆಯ (ವೇತನ ಶ್ರೇಣಿ ರೂ. 11400-21600, 2012ರ ಪರಿಷ್ಕೃತ ವೇತನ ಶ್ರೇಣಿ ರೂ. 22800-43200) ವೃಂದಕ್ಕೆ ವರ್ಗಾಯಿಸಿ ಸರ್ಕಾರವು ಆದೇಶಿಸಿದೆ.

ಶ್ರೀ ಮುಸ್ತಾಕ ಅಹ್ಮದ ಶಫೀಕ ಇವರಿಗೆ ಕಿರಿಯ ಇಂಜಿನಿಯರ್ ಹುದ್ದೆಯ ವೃಂದದಿಂದ ಸಹಾಯಕ ಇಂಜಿನಿಯರ್ ಹುದ್ದೆಯ ವೃಂದಕ್ಕೆ ವರ್ಗಾಯಿಸಿದ ನಂತರ, ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ರವರು ತಮ್ಮ ವ್ಯಾಪ್ತಿಯಲ್ಲಿ ಖಾಲಿ ಇರುವ ಸಹಾಯಕ ಇಂಜಿನಿಯರ್ ಹುದ್ದೆಯಲ್ಲಿ ಸ್ಥಳ ನಿಯುಕ್ತಿಗೊಳಿಸುವುದು.

---3

ಶ್ರೀ ಮುಸ್ತಾಕ ಅಹ್ಮದ ಶಫೀಕ, ಕಿರಿಯ ಇಂಜಿನಿಯರ್ ಇವರ ಸಹಾಯಕ ಇಂಜಿನಿಯರ್ ಹುದ್ದೆಯಲ್ಲಿನ ಸೇವಾ ಜೇಷ್ಠತೆಯು ಈ ಆದೇಶ ಹೊರಡಿಸಿದ ದಿನಾಂಕದಿಂದ ಅನ್ವಯವಾಗುತ್ತದೆ ಹಾಗೂ ಈ ಹುದ್ದೆಯಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕದಿಂದ ಆ ಹುದ್ದೆಗೆ ಲಭ್ಯವಿರುವ ಆರ್ಥಿಕ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಸಂಖ್ಯೆ: ಗ್ರಾಅಪ 186 ಆಂಆಸ 2012, ದಿನಾಂಕ. 05-11-2012ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹೆಚ್.ಸಿ.ರಾಜಪ್ಪ),
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ:

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಗುಲಬರ್ಗಾ.
4. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
5. ಗ್ರಾ.ಅ.ರಾಜ್ ಇಲಾಖೆಯ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್) / ಉಪ ಕಾರ್ಯದರ್ಶಿ (ಆಡಳಿತ-2) ಇವರ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು.
6. ಶ್ರೀ ಮುಸ್ತಾಕ ಅಹ್ಮದ್ ಶಫೀಕ್, ಕಿರಿಯ ಇಂಜಿನಿಯರ್, ಪಂ.ರಾ.ಇಂ.ಉಪ-ವಿಭಾಗ, ಗುಲ್ಬರ್ಗಾ
7. ಕಾರ್ಯನಿರ್ವಾಹಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಗುಲ್ಬರ್ಗಾ
8. ಹೆಚ್ಚುವರಿ ಪ್ರತಿ: ರಕ್ಷಾ ಕಡತ: ಮಾಹಿತಿ ಕೇಂದ್ರ.